ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೆ ಹಣ ಸ್ಯಾಂಕ್ಷನ್ ಆದ ಮಾಹಿತಿ ನನಗೆ ದೊರಕಿದೆ. ಶಾಸಕನಾದ ನನಗೆ ಮಾಹಿತಿ ದೊರತ ಮೇಲೆ ನಾನು ನನ್ನ ಕ್ಷೇತ್ರದ ಜನರಿಗೆ ಹೇಳಿದ್ದೇನೆ. ಅಷ್ಟು ಜವಾಬ್ದಾರಿಯಿಂದ ನಾನು ಮಾಡಲಿಲ್ಲವೆಂದರೆ ಹೇಗೆ ಅಧ್ಯಕ್ಷರೆ?

ಅಧ್ಯಕ್ಷರು: ನೀವು ಚೆನ್ನಾಗಿ ಮಾಡಿದ್ದೀರಿ.

ಖಾಸಗಿ ವ್ಯಕ್ತಿಗಳಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದ ಹೋಟೆಲುಗಳನ್ನು ವಹಿಸುವುದರ ಬಗ್ಗೆ

1850 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಾರ್ತಾ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರದಲ್ಲಿ ಮತ್ತು ಹೊರ ರಾಜ್ಯಗಳಲ್ಲಿರುವ ಕೆ.ಎಸ್.ಟಿ.ಡಿ.ಸಿ. ಹೋಟೆಲುಗಳ ಸಂಖ್ಯೆ ಎಷ್ಟು?*

ಆ) *ಸದರಿ ಹೋಟೆಲುಗಳು ಇರುವ ಸ್ಥಳಗಳು*

ಇ) *ಅದರಲ್ಲಿ 1990-91ರಲ್ಲಿ ಒಟ್ಟಾರೆ ನಷ್ಟದಲ್ಲಿರುವ ಹೋಟೆಲುಗಳ ಸಂಖ್ಯೆ ಎಷ್ಟು?*

ಈ) ನಷ್ಟದಲ್ಲಿ ನಡೆಯುತ್ತಿರುವ ಹೋಟೆಲುಗಳನ್ನು ಖಾಸಗಿಯವರಿಗೆ ಕೊಡಲು ಪ್ರಸ್ತಾಪನೆ ಏನಾದರೂ ಇದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು):

ಅ) ರಾಜ್ಯದಲ್ಲಿ 15 ಹೋಟೆಲುಗಳು ಮತ್ತು 5 ಉಪಹಾರ ಗೃಹಗಳು

ಹೊರ ರಾಜ್ಯದಲ್ಲಿ 2 ಹೋಟೆಲುಗಳು ಒಟ್ಟು 17 ಹೋಟೆಲುಗಳು 5 ಉಪಹಾರ ಗೃಹಗಳು

ಆ) ಪಟ್ಟಿ ಲಗತ್ತಿಸಿದೆ

ಇ)

1) ಹೋಟೆಲ್‌ಮಯೂರ ಬಹಮನಿ ಗುಲ್ಬರ್ಗ
2) ಹೋಟೆಲ್ ಮಯೂರ ಬರೀದ್ ಶಾಹಿ ಬಿದರ್
3) ಹೋಟೆಲ್ ಮಯೂರ ಕೆಂಪೇಗೌಡ ಬೆಂಗಳೂರು
4) ಹೋಟೆಲ್ ಮಯೂರ ಕೇಶವ ಸೋಮನಾಥಪುರ
5) ಹೋಟೆಲ್ ಮಯೂರ ಸಹ್ಯಾದ್ರಿ ದಾಂಡೇಲಿ

ಈ) ಇಲ್ಲ.

LIST OF HOTELS OF K.S.T.D.C.

Sl No	*Name*
1.	Mayura adilashahi Bijapur
2.	Mayura Baridshahi Bidar
3.	Mayura Chalukya Badami
4.	Mayura Bahamani Gulbarga

5. Mayura Sahyadri, Dandeli
6. Mayura Vijayanagara T.B. Dam, (Hospet)
7. Mayura Velapuri Belur
8. Mayura Riverview Srirangapatna
9. Mayura Keshava Somanathapur
10. Mayura Hoysala Mysore
11. Mayura Cauvery K.R.S.
12. Mayura Valleyview Mercara
13. Mayura Netravathi Mangalore
14. Mayura Sudarashan Ooty
15. Mayura Pine-top Nandi Hills
16. Mayura Sapthagiri, Tirumala
17. Mayura Kempegowda Bangalore

RESTAURANTS

1. Mayura Cubbon park Resturant Bangalore.
2. Mayura Vanashree Restaurant Bannerghatta
3. Mayura banyan Tree Restaurant Ramohalli
4. Mayura highway Restaurant Maddur
5. Mayura Nisarga Restaurant Muthyalamaduvu.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ: ಮಾನ್ಯ ಅಧ್ಯಕ್ಷರೆ ಕರ್ನಾಟಕ ಸ್ಟೇಟ್ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್ ಕರ್ನಾಟಕದಲ್ಲಿ ಟೂರಿಸಂ ಡೆವಲಪ್‌ಮೆಂಟ್ ಮಾಡುವುದಕ್ಕೆ ಇದೆ ಆದರೆ ಅದು ತಮಿಳುನಾಡು ರಾಜ್ಯದಲ್ಲಿ ತಿರುಪತಿಯಲ್ಲಿ ಇವರು ಟೂರಿಸಂ ಹೋಟೆಲುಗಳನ್ನು ಓಪನ್ ಮಾಡುತ್ತಿದ್ದಾರೆ. ಕರ್ನಾಟಕ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್ ಇರುವ ಉದ್ದೇಶ ಅಲ್ಲಿ ಹೋಟೆಲುಗಳನ್ನು ಓಪನ್ ಮಾಡುವುದಕ್ಕೆ ಇದ್ದೆಯೇ? ಅದು ನನಗೆ ಗೊತ್ತಾಗುತ್ತಿಲ್ಲ. ನನ್ನ ಎರಡನೆಯ ಪ್ರಶ್ನೆಗೆ ಐದು ಹೋಟಲ್‌ಗಳು ವರ್ಷದಲ್ಲಿ ನಡೆಯುತ್ತಿವೆ ಎಂದು ಹೇಳಿದ್ದಾರೆ. ಈ ಐದು ಹೋಟೆಲ್‌ಗಳು ಏತಕ್ಕೆ ಲಾಸಸ್‌ನಲ್ಲಿ ನಡೆಯುತ್ತಿವೆ? ಇವು ಲಾಸ್‌ನಲ್ಲಿ ನಡೆಯುತ್ತಿರುವ ಬಗ್ಗೆ ಇನ್‌ಸ್ಪಿಗೇಷನ್ ಮಾಡಿ ಲಾಭ ನಡೆಯುವಂತೆ ಮಾಡಲಿಕ್ಕೆ ತಾವು ನೋಡಿ ಏನಾದರೂ ಮಾಡಿದ್ದೀರಾ? ಅದರ ಬಗ್ಗೆ ಅಧಿಕಾರಿಗಳನ್ನು ವಿಚಾರಿಸಿದ್ದೀರಾ ಎಂದು ಪ್ರಶ್ನೆಯನ್ನು ಕೇಳುತ್ತೇನೆ. ನನ್ನ ಮೂರನೆಯ ಪ್ರಶ್ನೆ ಏನೆಂದರೆ ಮೈಸೂರು ಬೆಂಗಳೂರು ಗುಲ್ಬರ್ಗ ಮತ್ತು ಮಂಗಳೂರು ಇಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಎಲ್ಲಿ ಫೈವ್‌ಸ್ಟಾರ್ ಹೋಟಲ್‌ಗಳಿವೆ ತ್ರೀಸ್ಟಾರ್ ಹೋಟಲ್‌ಗಳಿವೆ ಅಂತಹ ಕಡೆ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ರವರು ಹೋಟೆಲ್‌ಗಳನ್ನು ಮತ್ತು ರೆಸ್ಟೋರೆಂಟ್‌ಗಳನ್ನು ಓಪನ್ ಮಾಡಿದರೆ ಟೂರಿಸಂ ಡೆವಲಪ್‌ಮೆಂಟ್ ಉದ್ದೇಶ ಸಫಲವಾಗುವುದಿಲ್ಲ ಅದನ್ನು ಏತಕ್ಕೋಸ್ಕರ ಓಪನ್ ಮಾಡಿದ್ದೀರರಿ? ಅಂತಹ ಕಡೆಗಳಲ್ಲಿರುವ ಹೋಟೆಲ್

ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚಬೇಕು. ಅತಿ ಮುಖ್ಯವಾಗಿ ಸ್ಥಳಗಳಲ್ಲಿ ಟೂರಿಸಂ ಸ್ಥಳಗಳಲ್ಲಿ ಹಿಲ್ ಸ್ಟೇಷನ್‌ಗಳಲ್ಲಿ ಹೋಟೆಲ್‌ಗಳನ್ನು ತೆರೆಯಬೇಕು. ಸಿಟಿಗಳಲ್ಲಿರುವ ಹೋಟೆಲ್‌ಗಳನ್ನು ಮುಚ್ಚಿ ನಾನು ಹೇಳಿದ ಸ್ಥಳಗಳಲ್ಲಿ ಹೋಟೆಲ್‌ಗಳನ್ನು ತೆರೆಯಲಾಗುವುದೇ ಎಂದು ನಾನು ಪ್ರಶ್ನೆ ಕೇಳುತ್ತೇನೆ?

ಶ್ರೀ ಕೆ. ಶಿವಮೂರ್ತಿ: ಮಾನ್ಯ ಅಧ್ಯಕ್ಷರೇ ಕೆ.ಎಸ್.ಟಿ.ಡಿ.ಸಿ.ಯಿಂದ ಈಗ ನಾವು ಸುಮಾರು 22ಹೋಟೆಲುಗಳನ್ನು ನಡೆಸುತ್ತಿದ್ದೇವೆ. ಇದರಲ್ಲಿ 17ಹೋಟೆಲ್‌ಗಳು ಮತ್ತು 5 ರೆಸ್ಟೋರೆಂಟುಗಳು ಇದರಲ್ಲಿ 5 ಹೋಟೆಲ್‌ಗಳು ಲಾಸ್‌ನಲ್ಲಿ ನಡೆಯುತ್ತಿವೆ. ಇದು ಯಾವರೀತಿ ಲಾಸ್ ಆಗುತ್ತಿದೆ ಏಕೆ ಆಗುತ್ತಿದೆ ಎನ್ನುವುದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ನಾವು ಸಾಕಷ್ಟು ಮಟ್ಟಿಗೆ ಎಲ್ಲರ ಹತ್ತಿರ ಚರ್ಚೆ ಮಾಡಿ ಅಧಿಕಾರಿಗಳ ಹತ್ತಿರ ಚರ್ಚೆಮಾಡಿ ಇದು ಯಾವ ಕಾರಣದಿಂದ ಲಾಸ್ ಆಗುತ್ತಿದೆ ಎನ್ನುವುದರ ಬಗ್ಗೆ ಸರ್ಕಾರ ಬಹಳ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ಈಗ ಈ ಹೋಟೆಲುಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಎಲ್ಲಿ ಟೂರಿಸ್ಟ್ ಸೆಂಟರ್ಸ್ ಇವೆಯೋ ಆ ಜಾಗದಲ್ಲಿ ಹೋಟೆಲ್‌ಗಳನ್ನು ತೆರೆಯತಕ್ಕಂಥ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಿದ್ದಾರೆ. ತಮಿಳುನಾಡಿನಲ್ಲಿ ಯಾವರೀತಿ ವ್ಯವಸ್ಥೆ ಮಾಡಿದ್ದಾರೆ ಆ ದಿಸೆಯಲ್ಲಿ ಇಲ್ಲಿ ಆಗಬೇಕು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಅದೇರೀತಿಯಲ್ಲಿ ನಾವು ಸಹ ಬೇರೆ ರಾಜ್ಯದಲ್ಲಿ ಯಾವ ರೀತಿ ಒಳ್ಳೆಯ ಫೆಸಿಲಿಟೀಸ್ ಕೊಟ್ಟಿದ್ದಾರೋ ಅದೇರೀತಿಯಲ್ಲಿ ನಮ್ಮ ಕರ್ನಾಟಕದಲ್ಲೂ ಫೆಸಿಲಿಟೀಸ್ ಕೊಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ ಆದರೆ ಅದಕ್ಕೆ ಸಾಕಷ್ಟು ಮಟ್ಟಿಗೆ ಇನ್‌ಸ್ಟ್ರಕ್ಚರ್ ಫೆಸಿಲಿಟೀಸ್ ಕೊಡಿಲಿಕ್ಕೆ ಹಣಕಾಸಿನ ಇತಿಮಿತಿಯನ್ನು ನಾವು ಇಟ್ಟುಕೊಂಡು ಮುಂದಕ್ಕೆ ಹೆಚ್ಚು ಹಾಕಬೇಕಾಗುತ್ತದೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈ ಐದು ಹೋಟೆಲ್‌ಗಳ ಬಗ್ಗೆ ಏಕೆ ಲಾಸ್ ಆಗಿದೆ ಎನ್ನುವುದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಐದು ಹೋಟೆಲ್‌ಗಳು ಯಾವುದೆಂದರೆ 1ಹೋಟೇಲ್ ಮಯೂರ ಬಹಮನಿ ಗುಲ್ಬರ್ಗಾ 2 ಹೋಟೆಲ್ ಮಯೂರ ಬರೀದ್ ಶಾಹಿ ಬೀದರ್ 3. ಹೋಟೆಲ್ ಮಯೂರ ಕೆಂಪೇಗೌಡ ಬೆಂಗಳೂರು 4 ಹೋಟೆಲ್ ಮಯೂರ ಕೇಶವ ಸೋಮನಾಥಪುರ 5 ಹೋಟೇಲ್ ಮಯೂರ ಸಹ್ಯಾದ್ರಿ ದಾಂಡೇಲಿ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ: ನನ್ನ ಎರಡನೇ ಮತ್ತು ಮೂರನೇ ಪ್ರಶ್ನೆಗೆ ತಾವು ಉತ್ತರಕೊಟ್ಟಿಲ್ಲ. 2ನೇ ಪ್ರಶ್ನೆ ರಾಜ್ಯದ ಹೊರಗಡೆ ಊಟಿಯಲ್ಲಿ ತಿರುಪತಿಯೊಳಗೆ ಕರ್ನಾಟಕ ಟೂರಿಸಂ ಡೆವಲಪ್‌ಮೆಂಟ್ ಮಾಡುವುದಕ್ಕೆ ಅಲ್ಲಿ ಏಕೆ ಓಪನ್ ಮಾಡಿದ್ದೀರಾ? ನಮ್ಮ ಕರ್ನಾಟಕ ರಾಜ್ಯದಲ್ಲೇ ಮಾಡಿದರೆ ನಮ್ಮ ಕರ್ನಾಟಕ ಟೂರಿಸಂ ಡೆವಲಪ್ ಆಗುತ್ತದೆ. ಮತ್ತು ಮೂರನೇ ಪ್ರಶ್ನೆ ಎಂದರೆ ಮೈಸೂರು ಗುಲ್ಬರ್ಗಾ ಬೆಂಗಳೂರು ಮತ್ತು ಮಂಗಳೂರು ಇಂಥ ದೊಡ್ಡ ದೊಡ್ಡ ಸಿಟಿಗಳಲ್ಲಿ ತ್ರೀಸ್ಟಾರ್ ಹೋಟೆಲ್‌ಗಳು ಫೈವ್‌ಸ್ಟಾರ್ ಹೋಟೆಲ್‌ಗಳು ಇವೆ. ಇಂಥ ಕಡೆ ನೀವೂ ಟೂರಿಸ್ಟ್ ಹೋಟೆಲ್‌ಗಳನ್ನು ಓಪನ್ ಮಾಡಿದ್ದೀರಿ ಇದು ಟೂರಿಸಂ ಡೆವಲಪ್‌ಮೆಂಟ್‌ಗೋಸ್ಕರ ಮಾಡಿದ್ದೀರೋ ಇಲ್ಲವೋ? ಬರೀ ಸರ್ಕಾರಿ ಅಧಿಕಾರಿಗಳು ಹೋಗಿ ಇದ್ದು ಬರುವುದಕ್ಕೋಸ್ಕರ ಮಾಡಿದ್ದೀರೋ? ಈ ಎರಡು ಪ್ರಶ್ನೆಗಳಿಗೆ ನಾನು ಉತ್ತರ ಕೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ: ಈಗ ದೇಶವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಅವರ ಮಟ್ಟಕ್ಕೆ ಸರಿಯಾದುದು ಮತ್ತು ಅವರ ಸ್ಟ್ಯಾಂಡರ್ಡ್‌ಗೆ ಸರಿಯಾದ ಹೋಟೆಲುಗಳನ್ನು ಹಿಂದೆ ಸ್ಥಾಪನೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಪೆರಿಕಲ್

ಮಲ್ಲಪ್ಪನವರು ಹೋದಸಾರಿ ಏರ್‌ಟ್ರಿಪ್ಸ್ ಬೇಕು ಅಂತ ಹೇಳಿದ್ದರು ಅದು ಬರೇ ಫಾರೀನ್ ಟೂರಿಸ್ಟ್‌ಗೋಸ್ಕರ ಅವರು ಫೈವ್‌ಸ್ಟಾರ್ ತ್ರೀಸ್ಟಾರ್ ಹೋಟೆಲ್‌ಗಳು ಬೇಕು ಅಂತ ಕೇಳುತ್ತಾರೆ ಆದರೆ ನಮ್ಮ ದೇಶೀಯವಾಗಿ ಬರತಕ್ಕಂಥ ಟೂರಿಸ್ಟ್‌ಗಳು ಯಾರಿದ್ದಾರೆ ಅವರಿಗೆ ಅಷ್ಟು ಕಾಸ್ಸನ್ನು ಕೊಡುವುದಕ್ಕಾಗುವುದಿಲ್ಲ. ಹಿಂದೆ ಕಟ್ಟಿದ ಹೋಟೇಲ್‌ಗಳು ಪಟ್ಟಣಗಳಲ್ಲಿವೆ ಈಗ ಕಟ್ಟತಕ್ಕಂಥ ಹೋಟೆಲ್‌ಗಳು ಮತ್ತು ಮುಂದೆ ಕಟ್ಟತಕ್ಕಂಥಾದ್ದು ಟೂರಿಸ್ಟ್ ಸ್ಪಾಟ್‌ಗಳು ಎಲ್ಲಿ ಜಾಸ್ತಿ ಪ್ರವಾಸಿಗರು ಹೋಗುತ್ತಾರೆ ಅಂಥಹ ಸ್ಥಳಗಳನ್ನು ನಾವು ಗುರುತಿಸಿದ್ದೇವೆ ಗುರುತಿಸಿ - ಕೆಲವು ಕಡೆ ಇಂಥ ಕಟ್ಟಡ ಬೇಕೆಂದು ಸರ್ಕಾರಕ್ಕೆ ಪ್ರಪೋಸಲ್ ಕೊಟ್ಟಿದ್ದೇವೆ. ಅದು ಪರಿಶೀಲನೆಯ ಹಂತದಲ್ಲಿದೆ.

ಅಧ್ಯಕ್ಷರು: ಶ್ರೀ ಸಾದತ್ ಅಲಿಖಾನ್‌ರವರೇ ನಿಮ್ಮ ಪ್ರಶ್ನೆ 2137 ಮಾನ್ಯ ನೀರಾವರಿ ಮಂತ್ರಿಗಳು ಅರ್ಜೆಂಟಾಗಿ ಎಲ್ಲೋ ಹೋಗಬೇಕಾಗಿದೆ ಎಂದು ಹೇಳಿದ್ದಾರೆ. ಬಹುಶಃ ಅವರು ನಿಮಗೆ ತಿಳಿಸಿರಬೇಕೆಂದು ಕಾಣುತ್ತದೆ.

ಶ್ರೀ ಸಾದತ್ ಅಲಿಖಾನ್: ಇಲ್ಲ

ಅಧ್ಯಕ್ಷರು: ನಾನು ತಿಳಿಸುತ್ತಿದ್ದೇನೆ 27ನೇ ತಾರೀಖಿಗೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಸಾದತ್ ಅಲಿಖಾನ್: ಆಗಬಹುದು

ಕೊಡಗು ಜಿಲ್ಲೆ ಪರಿಷತ್ತಿಗೆ ವ್ಯಾಪ್ತಿಗೆ ಬರುವ ರಸ್ತೆಗಳು

1907 - ಶ್ರೀ ಮತಿ ಸುಮಾ ವಸಂತ (ವೀರಾಜಪೇಟೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಕೊಡಗು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವ ಒಟ್ಟು ರಸ್ತೆಗಳೆಷ್ಟು? (ತಾಲ್ಲೂಕು ವಿವರಗಳನ್ನು ಒದಗಿಸುವುದು)

ಆ) ಇವುಗಳಲ್ಲಿ ಮುಖ್ಯ ಜಿಲ್ಲಾ ರಸ್ತೆಗಳು ಇತರ ಜಿಲ್ಲಾ ರಸ್ತೆಗಳು ಹಾಗೂ ಗ್ರಾಮೀಣಾ ರಸ್ತೆಗಳೆಷ್ಟು? (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಇ) ಇವುಗಳು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಇವುಗಳ ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉ) 1988-89 1989-90ನೇ ಸಾಲುಗಳಲ್ಲಿ ವೀರಾಜಪೇಟೆ ಕ್ಷೇತ್ರದಲ್ಲಿ ಎಷ್ಟು ಉದ್ದದ ರಸ್ತೆಯನ್ನು ರಾಷ್ಟೀಕರಣ ಮಾಡಲಾಗಿದೆ (ಮಂಡಲವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ಕೊಡಗು ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುವ ರಸ್ತೆಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

	ಕಿ.ಮೀ.ಗಳು
ಮಡಿಕೇರಿ	255.51
ಸೋಮವಾರ ಪೇಟೆ	302.60
ವೀರಾಜಪೇಟೆ	388.51
ಒಟ್ಟು	**956.62**